MANUVIKASA

Success Stories

# ನರೂರು ಕೆರೆ ಅಭಿವೃದ್ಧಿ ಕಥನ

*ಸಾರಾಂಶ: ಕೆರೆ ಅಭಿವೃದ್ಧಿ ಎಂದರೆ ಕೇವಲ ನೀರು ನಿಲ್ಲುವ ಸಾಮರ್ಥ್ಯ ಹೆಚ್ಚಳವಲ್ಲ. ಅಲ್ಲೊಂದು ಸೂಕ್ಷ್ಮ ಪರಿಸರ ಸೃಷ್ಟಿಯಾಗುತ್ತದೆ, ಜನ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಬದುಕಿಗೆ ಒಂದು ಚಲನೆ ದೊರೆಯುತ್ತದೆ. ಸುಸ್ಥಿರ ಅಭಿವೃದ್ಧಿಯ ಸಾಧ್ಯತೆಯ ದಾರಿಗಳು ತೆರೆದುಕೊಳ್ಳುತ್ತವೆ. ಅದಕ್ಕೆ ಉತ್ತಮ ಉದಾಹರಣೆ ಈ ನರೂರು ಕೆರೆ ಅಭಿವೃದ್ಧಿ.*

ಉತ್ತರಕನ್ನಡ ಜಿಲ್ಲೆ ಶಿರಸಿ ತಾಲ್ಲೂಕು ಬನವಾಸಿ ಹೋಬಳಿಯ ನರೂರಿನ ಅಗಸೆಬಾಗಿಲು ಕೆರೆ 64 ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸುತ್ತದೆ. ಊರಿನ ಪಕ್ಕದಲ್ಲೇ (ಅಗಸೆ) ಇರುವುದರಿಂದ 'ಅಗಸೆ ಬಾಗಿಲು ಕೆರೆ' ಎಂಬ ಹೆಸರು ಬಂದಿದೆ. ಇದರ ನೀರು ನಿಲ್ಲುವ ಸ್ಥಳ 17 ಎಕರೆ. ನರೂರು ಜೊತೆಗೆ ಮಜರೆ ಗ್ರಾಮಗಳಾದ ಎಡೆಗೊಪ್ಪ, ಮುತಾಳಕೊಪ್ಪ, ಲಿಂಗನಮಟ್ಟಿ ಹಾಗೂ ಬನವಾಸಿ ಗ್ರಾಮಗಳಿಗೂ ಕೆರೆ ಉಪಯೋಗಕಾರಿ. ಒಟ್ಟು ಸುಮಾರು 160 ಕುಟುಂಬಗಳು ಪ್ರಯೋಜನ ಪಡೆಯುತ್ತಿವೆ. ಅಚ್ಚುಕಟ್ಟಿನಲ್ಲಿ ಮುಂಗಾರಿನಲ್ಲಿ ಭತ್ತವೇ ಪ್ರಧಾನ ಬೆಳೆ. ಹಿಂಗಾರಿನಲ್ಲಿ ವಿವಿಧ ಬೆಳೆಗಳನ್ನು ಹಾಕುವುದು ರೂಢಿ. ಕೆರೆ ಕೋಡಿ ಬಿದ್ದರೆ ಆ ನೀರು ಹಳ್ಳದ ಗುಂಟ ಸಾಗಿ ಎರಡು ಕಿಲೋ ಮೀಟರ್ ದೂರದ ವರದಾ ನದಿ ಸೇರುತ್ತದೆ.



ಗ್ರಾಮದ ಕೃಷಿಕರಾದ ವಿನಾಯಕ ಭಟ್ 2012ರಲ್ಲಿ ಈ ಕೆರೆಯ ಅಚ್ಚುಕಟ್ಟಿನಲ್ಲಿ ಸಾಮಾನ್ಯವಾಗಿ ಕಾಣುತ್ತಿದ್ದ ದೃಶ್ಯಗಳನ್ನು ಹೀಗೆ ನೆನೆಸಿಕೊಳ್ಳುತ್ತಾರೆ. "ಕೆರೆ ನೀರು ಹಾಯಿಸುವ ಜಮೀನೆಲ್ಲ ನಡುವೆ ಒಂದಿಷ್ಟೂ ಎಡೆಯಿಲ್ಲದಂತೆ ಹಸಿರಾಗಿತ್ತು. ಹಿಂಗಾರಿಯಲ್ಲೂ 150 ಎಕರೆ ಪ್ರದೇಶದಲ್ಲಿ ಹಲವು ಬೆಳೆಗಳಿದ್ದವು. ಅವುಗಳಲ್ಲಿ ಶೇಂಗಾ ಪಾಲು ಅಧಿಕ. ಜೊತೆಗೆ ಉದ್ದು, ಹೆಸರು, ಬವಡೆ, ಅವರೆ, ಎಳ್ಳು, ಸಾಸಿವೆ, ಮೇವಿನ ಜೋಳ, ಸೆಣಬು, ಮೂಲಂಗಿ ಇತ್ಯಾದಿಗಳ ಬೆಳೆ ವೈವಿಧ್ಯತೆ. ಕೊಳವೆಬಾವಿಗಳ ಸಂಖ್ಯೆ ತಿ

೦ೀರಾ ಕಡಿಮೆ. ಹೊಲಗಳಲ್ಲಿ ಕೆಲಸ ನಿರತ ಜನರು".

ಅವರೇ ಹೇಳುವಂತೆ 2015–18ರ ಅವಧಿಯಲ್ಲಿ ತೀವ್ರ ಬರಗಾಲ ಆವರಿಸಿತು. ಕೆರೆ ಬತ್ತಿತು. ಕೊಳವೆಬಾವಿಗಳ ಸಂಖ್ಯೆ ಏರಿಕೆಯಾಯಿತು. ಅಧಿಕ ರಸಗೊಬ್ಬರ ಹಾಗೂ ಕೀಟನಾಶಕ ಬಳಕೆ. ಹಿಂಗಾರಿ ಬೆಳೆ ಹಾಕುವ ರೈತರ ಸಂಖ್ಯೆ ಇಳಿಮುಖ, ಇಳುವರಿಯೂ ಸಹ ಕಡಿಮೆಯಾಯಿತು. ವೈವಿಧ್ಯಮಯ ಬೆಳೆಗಳ ಜಾಗದಲ್ಲಿ ಮೆಕ್ಕೆಜೋಳದ ಆಗಮನ.



2009ರಲ್ಲಿ ಗ್ರಾಮದಲ್ಲಿ ಕೆರೆ ಬಳಕೆದಾರರ ಸಂಘ ಆರಂಭವಾಗಿ ಸರ್ಕಾರದ ಜಲಸಂವರ್ಧನೆ ಯೋಜನೆ ಮೂಲಕ ಇಲ್ಲಿನ ಎರಡು ಕೆರೆಗಳನ್ನು (ಅಗಸೆ ಬಾಗಿಲು ಕೆರೆ ಮತ್ತು ಸವತಿ ಕೆರೆ) ಅಭಿವೃದ್ಧಿಪಡಿಸಲಾಗಿತ್ತು. ಆಗ ಆರಂಭವಾದ ಸಂಘವು ಈಗಲೂ ಚಾಲ್ತಿಯಲ್ಲಿದೆ. ಆದರೆ ಆಗ ಕೆರೆಯಲ್ಲಿ ಹೂಳು ತೆಗೆದ ಪ್ರಮಾಣ ಕಡಿಮೆ. ಕಾರಣ ಆ ಯೋಜನೆಯಲ್ಲಿ ಹೂಳು ತೆಗೆಯಲು ನಿರ್ಭಂಧ ಇತ್ತು. ಅಲ್ಲದೆ ಹೂಳು ತೆಗೆದು 12–13 ವರ್ಷಗಳು ಕಳೆದಿದ್ದರಿಂದ ಮತ್ತೆ ಹೂಳು ತುಂಬಿಕೊಂಡು ನೀರು ಶೇಖರಣಾ ಸಾಮರ್ಥ್ಯ ಕುಂಠಿತವಾಗಿತ್ತು. ಸ್ವಲ್ಪ ಮಳೆ ಬಂದರೂ ಕೆರೆ ತುಂಬಿಕೊಳ್ಳುತ್ತಿತ್ತು, ಆದರೆ ಅಷ್ಟೇ ಬೇಗ ನೀರು ಖಾಲಿಯಾಗುತ್ತಿತ್ತು. ಬೇಸಿಗೆಯಲ್ಲಿ ಬತ್ತುವುದು ಸಾಮಾನ್ಯವಾಗಿಬಿಟ್ಟಿತು.

2018ರಲ್ಲಿ ಮನು ವಿಕಾಸ ಸಂಸ್ಥೆಯು ಕೊಕೊಕೋಲಾ ಕಂಪನಿಯ ಆರ್ಥಿಕ ನೆರವಿನೊಂದಿಗೆ ಕೆರೆಗಳ ಅಭಿವೃದ್ಧಿಪಡಿಸುತ್ತಿದ್ದು, ನರೂರು ಗ್ರಾಮದ ಅಗಸೆಬಾಗಿಲು ಕೆರೆಯನ್ನೂ ಆಯ್ಕೆ ಮಾಡಿಕೊಂಡಿತು. ಸತತ 90 ದಿವಸಗಳ ಕಾಲ 2 ಹಿಟಾಚಿ ಹಾಗೂ 12 ಟ್ರ್ಯಾಕ್ಟರ್ ಗಳ ಮೂಲಕ ಈ ಕೆರೆಯ ಹೂಳು ರೈತರ ಜಮೀನುಗಳಿಗೆ ಸಾಗಾಟ. ಹಿಟಾಚಿಯನ್ನು ಮಾತ್ರ ಮನು ವಿಕಾಸ ಒದಗಿಸಿದ್ದು ಟ್ರ್ಯಾಕ್ಟರ್ ಗಳನ್ನು ರೈತರೇ ತಂದು ಹೂಳು ತಮ್ಮ–ತಮ್ಮ ಜಮೀನುಗಳಿಗೆ ಸಾಗಿಸಿಕೊಂಡಿದ್ದು ವಿಶೇಷ. ಹಿಟಾಚಿ ಚಾಲಕರ ಊಟವನ್ನೂ ಗ್ರಾಮಸ್ಥರೇ ನೋಡಿಕೊಂಡರು. ಕೆರೆಯ ಗೋಡು ಮರಳು ಮಿಶ್ರಿತ ಕೆಂಪುಮಣ್ಣು, ಹೊಲಗಳಿಗೆ ಹಾಕಿದರೆ ಫಲವತ್ತತೆ ಹೆಚ್ಚಳ ಎಂಬುದು ಗ್ರಾಮಸ್ಥರ ಅನಿಸಿಕೆ. ದಿನಕ್ಕೆ ಸುಮಾರು 250 ಟ್ರ್ಯಾಕ್ಟರ್ ಲೋಡಿನಂತೆ 90 ದಿನಗಳ ಕಾಲ ಹೂಳು ತೆಗೆಯಲಾಯಿತು.

2018ರಲ್ಲಿ ಆರಂಭವಾದ ಕೆಲಸ 2019ಕ್ಕೂ ಮುಂದುವರಿಯಿತು. ಕಾರಣ ಇನ್ನು ಸ್ವಲ್ಪ ಹೂಳು ತೆಗೆಯುವುದು ಬಾಕಿ ಇದ್ದಾಗ 2018ರಲ್ಲಿ ಮಳೆ ಬಂದು ಕೆರೆ ಭರ್ತಿಯಾಯಿತು. ಹಾಗಾಗಿ 2019ರ ಬೇಸಿಗೆಯಲ್ಲಿ ಮತ್ತೆ ಮನು ವಿಕಾಸ ಯಂತ್ರಗಳನ್ನು ಕಳಿಸಿ ಕೆಲವೇ ದಿನಗಳಲ್ಲಿ ಬಾಕಿ ಇದ್ದ ಹೂಳನ್ನು ತೆಗೆಸಿತು.

2019ರಿಂದ ಇಲ್ಲಿಯವರೆಗೆ (2022) ಗಮನಿಸಿದಾಗ ಕೆರೆಯಲ್ಲಿ ಹೂಳು ತೆಗೆದಿದ್ದರಿಂದ ಹಲವು ಬದಲಾವಣೆಗಳು ಗೋಚರಿಸಿವೆ. ಮುಖ್ಯವಾಗಿ ಫಲವತ್ತಾದ ಕೆರೆಯ ಹೂಳನ್ನು ಹೊಲಗಳಿಗೆ ಹಾಕಿಕೊಂಡ ಕಾರಣ ಬೆಳೆಗಳ ಇಳುವರಿ ಹೆಚ್ಚಳವಾಗಿದೆ. ಈ ಪ್ರಮಾಣವು ಸರಾಸರಿ ಶೇಕಡ 20–25 ಎನ್ನುತ್ತಾರೆ ಗ್ರಾಮದ ಕೃಷಿಕ ವಿನಾಯಕ ಭಟ್. ಕೆಲವು ರೈತರು ಶೇಕಡ 30–40ರಷ್ಟು ಇಳುವರಿ ಹೆಚ್ಚಿರುವುದನ್ನೂ ಗಮನಿಸಿದ್ದಾರೆ.

ಹೊಲಗಳಿಗೆ  ಹೂಳು ಬಳಸಿದ ವರ್ಷ ಬಹುತೇಕ ರೈತರು ರಸಗೊಬ್ಬರಗಳನ್ನು ಬಳಸಿಲ್ಲ, ಅಥವಾ ಅತೀ ಕಡಿಮೆ ಪ್ರಮಾಣದಲ್ಲಿ ಬಳಸಿದ್ದಾರೆ. ಇದು ಬಹುತೇಕ ಎಲ್ಲರ ಅಭಿಪ್ರಾಯ.  ಇದು ಎರಡು ರೀತಿಯಲ್ಲಿ ಲಾಭವಾಗಿದೆ. ಇಳುವರಿ ಹೆಚ್ಚಳದಿಂದ ಆದಾಯದಲ್ಲಿ ಹೆಚ್ಚಳ ಒಂದು ಕಡೆ ಆದರೆ ರಸಗೊಬ್ಬರ ಬಳಕೆ ನಿಲ್ಲಿಸಿದ್ದರಿಂದ ಕೃಷಿ ವೆಚ್ಚದಲ್ಲಿ ಗಣನೀಯ ಇಳಿಕೆಯಾಯಿತು. ಒಂದು ಉದಾಹರಣೆ ನೋಡುವುದಾದರೆ; ಒಂದು ಎಕರೆ ಭತ್ತದಲ್ಲಿ ಸಾಮಾನ್ಯ ವರ್ಷಗಳಲ್ಲಿ 10 ಕ್ವಿಂಟಾಲ್ ಇಳುವರಿ ಬರುತ್ತಿದ್ದರೆ, ಹೂಳು ಹಾಕಿದಾಗ 2 ಕ್ವಿಂಟಾಲ್ ಅಧಿಕ ಇಳುವರಿ ಬಂದಿದೆ. ಇದರ ಮೌಲ್ಯ ಸುಮಾರು ರೂ. 3000 ಎಂದಿಟ್ಟುಕೊಳ್ಳೋಣ. ಹಾಗೆಯೇ ಒಂದು ಎಕರೆಗೆ 3 ಚೀಲ ರಸಗೊಬ್ಬರ ಬಳಕೆ ಕಡಿಮೆ ಆಯಿತು ಎಂದರೂ ಅದರ ಮೌಲ್ಯ ಅಂದಾಜು ರೂ. 3000. ಹೀಗೆ ಒಟ್ಟಾರೆ ಒಂದು ಎಕರೆಗೆ ಒಬ್ಬ ರೈತನಿಗೆ ರೂ. 6000 ಹೆಚ್ಚುವರಿ ಲಾಭ ಬಂದಂತಾಯಿತು. ಕೆರೆ ಅಚ್ಚುಕಟ್ಟಿನ 150 ಎಕರೆಗೆ ಇದನ್ನು ಲೆಕ್ಕ ಹಾಕಿದರೆ ರೂ. 9 ಲಕ್ಷ ಹೆಚ್ಚುವರಿ ಆದಾಯ ಬಂದಂತಾಯಿತು. ವರ್ಷದಲ್ಲಿ ಎರಡು ಬೆಳೆ ಹಾಕುವುದರಿಂದ ಒಟ್ಟಾರೆ ಹೆಚ್ಚುವರಿ ಆದಾಯದ ಮೊತ್ತ 18 ಲಕ್ಷ ರೂ. ಆದಂತಾಗುತ್ತದೆ. ಅಂದರೆ ಕೆರೆ ಅವಲಂಬಿಸಿದ 160 ಕುಟುಂಬಗಳಿಗೆ ವಿಭಜಿಸಿದಾಗ ತಲಾ ವಾರ್ಷಿಕ 11,250 ರೂ ಹೆಚ್ಚುವರಿ ಆದಾಯವು ಇದರಿಂದ ದೊರೆತಿದೆ ಎನ್ನಬಹುದು.



ಕೆರೆ ಹೂಳು ತೆಗೆಯಲು ಮನು ವಿಕಾಸ ಸಂಸ್ಥೆ ವ್ಯಯಿಸಿದ ಮೊತ್ತ ಹಾಗೂ ರೈತರು ಖರ್ಚು ಮಾಡಿದ ಮೊತ್ತವೆಲ್ಲವೂ ಒಂದೇ ವರ್ಷದಲ್ಲಿ ಹಿಂತಿರುಗಿ ಬಂದಿದೆ ಎಂದರೆ ತಪ್ಪಿಲ್ಲ. ಒಂದು ಸಲ ಹೊಲಕ್ಕೆ ಕೆರೆ ಮಣ್ಣು ಹಾಕಿದರೆ ಮುಂದಿನ ಮೂರು ವರ್ಷ ಮಣ್ಣಿನ ಫಲವತ್ತತೆ ಉತ್ತಮವಾಗಿರುತ್ತದೆ ಹಾಗೂ ಮಣ್ಣಿನ ರಚನೆಯು ಸುಧಾರಿಸುತ್ತದೆ. ಈ ದೃಷ್ಟಿಯಿಂದ ನೋಡಿದರೆ ಕೆರೆ ಮಣ್ಣು ಬಳಕೆಯಿಂದ ಇಡೀ ಅಚ್ಚುಕಟ್ಟಿನಲ್ಲಿ ಕೃಷಿ ಉತ್ಪಾದಕತೆ ಪ್ರಮಾಣ ಹೆಚ್ಚಳವಾಗಿದೆ. ರಸಗೊಬ್ಬರ ಬಳಕೆಗೆ ಕಡಿವಾಣ ಹಾಕಿದ್ದರಿಂದ ಮಣ್ಣಿನ ಮಾಲಿನ್ಯ, ನೀರಿನ ಮಾಲಿನ್ಯದ ಪ್ರಮಾಣ ಕಡಿಮೆಯಾಗಿ ಅದರಿಂದ ಎರೆಹುಳು, ಜೇನು ಹುಳು, ಕ್ರಿಮಿಕೀಟಗಳ ಸಂಖ್ಯೆ ಹೆಚ್ಚಳವಾಗಿ ಪರಿಸರ ಸಮತೋಲನವೂ ಸಾಧ್ಯ.

ಅಂತರ್ಜಲ ಪ್ರಮಾಣ ಹೆಚ್ಚಳವಾಗಿರುವುದು ಕೆರೆ ಹೂಳು ತೆಗೆದಿದ್ದರಿಂದ ಆಗಿರುವ ಮತ್ತೊಂದು ಮಹತ್ತರ ಬದಲಾವಣೆ. ಸುಮಾರು 50–60 ತೆರೆದ ಬಾವಿಗಳ ಮರುಪೂರಣ ಆಗಿರುವುದನ್ನು ಗ್ರಾಮಸ್ಥರು ಗಮನಿಸಿದ್ದಾರೆ. ನರೂರಿನ ಶಾಲೆ ಹಿಂಭಾಗ ಒಂದು ಬಾವಿ ಇದೆ, ಇದು ಬೇಸಿಗೆಯಲ್ಲಿ ಬತ್ತಿ ಹೋಗುತ್ತಿತ್ತು. ಆದರೆ ಕೆರೆ ಹೂಳು ತೆಗೆದ ಪರಿಣಾಮ ಕಳೆದ 3 ವರ್ಷಗಳಿಂದ ಭರ್ತಿ ನೀರು ಇರುತ್ತದೆ. ಶಾಲೆಯು ಕೆರೆಯಿಂದ ಸುಮಾರು 200 ಮೀಟರ್ ದೂರದಲ್ಲಿದೆ.

ಇನ್ನು, ಕೆರೆ ಅಭಿವೃದ್ಧಿಯಿಂದ ಮಹಿಳೆಯರಿಗೂ ನೆಮ್ಮದಿ ದೊರೆತಿದೆ. "ಬೇಸಿಗೆಯಲ್ಲಿ ಬಟ್ಟೆ ಒಗೆಯಲು ದೂರ ಹೋಗಬೇಕಿತ್ತು, ಇಲ್ಲವೇ ಮನೆಯ ಬಳಿ ನಲ್ಲಿ ನೀರಿನಲ್ಲಿ ಬಟ್ಟೆಗಳನ್ನು ಸ್ವಚ್ಚಗೊಳಿಸಬೇಕಿತ್ತು. ಆದರೆ ಈಗ ಕೆರೆಯಲ್ಲೇ ಸಾಕಷ್ಟು ನೀರು ಲಭ್ಯವಿರುತ್ತದೆ. ಹೆಣ್ಣು ಮಕ್ಕಳಿಗೆ ತುಂಬಾ ಉಪಯೋಗವಾಗಿದೆ" ಎನ್ನುತ್ತಾರೆ ಗ್ರಾಮದ ಭಾರತಿ ನಾಯ್ಕ.

ಕೆರೆ ಸುತ್ತ–ಮುತ್ತಲ ಕೆಲ ರೈತರ ಜಮೀನುಗಳು ತಗ್ಗು ಪ್ರದೇಶದಲ್ಲಿದ್ದವು. ಹೆಚ್ಚು ಮಳೆಯಾಗಿ ಕೆರೆ ತುಂಬಿದಾಗ ಆ ಪ್ರದೇಶಗಳಲ್ಲಿ ನೀರು ತುಂಬಿಕೊಳುತ್ತಿತ್ತು. ಅಲ್ಲದೆ ವರದಾ ನದಿಯಲ್ಲಿ ಪ್ರವಾಹ ಬಂದಾಗಲೂ ಈ ತಗ್ಗು ಪ್ರದೇಶಗಳಿಗೆ ನೀರು ನುಗ್ಗುತ್ತಿತ್ತು. ಭತ್ತ ನಾಟಿ ಮಾಡಿದ್ದರೆ ಅದೆಲ್ಲ ಕೊಳೆತು ಮತ್ತೆ ನಾಟಿ ಮಾಡಬೇಕಿತ್ತು. ನೀರು ತಿಂಗಳುಗಟ್ಟಲೆ ನಿಂತರೆ ಯಾವುದೇ ಬೆಳೆ ಬರುತ್ತಿರಲಿಲ್ಲ. ಕೆರೆಯ ಹೂಳು ತೆಗೆದಾಗ ರೈತರು ಈ ತಗ್ಗು ಪ್ರದೇಶಗಳಿಗೆ ಕೆರೆ ಮಣ್ಣು ಹಾಕಿಕೊಂಡು ಎತ್ತರ ಮಾಡಿಕೊಂಡರು. ಈಗ ನೀರು ನಿಲ್ಲುವ ಸಮಸ್ಯೆ ಸಂಪೂರ್ಣ ನಿವಾರಣೆಯಾಗಿದೆ. ಈ ರೀತಿ ಸುಮಾರು 20–30 ಎಕರೆ ಪ್ರದೇಶ ಬಾಧೆಗೊಳಗಾಗುತ್ತಿದ್ದು ಈಗ ಅಲ್ಲಿ ವರ್ಷದ ಎರಡು ಬೆಳೆ ಆತಂಕವಿಲ್ಲದೆ ತೆಗೆದುಕೊಳ್ಳುತ್ತಿದ್ದಾರೆ ರೈತರು. ಈ ರೀತಿ ನೀರು ನಿಲ್ಲುತ್ತಿದ್ದಾಗ ರೈತರ ನಡುವೆ ಹಾಗೂ ರೈತರು ಮತ್ತು ಪಂಚಾಯ್ತಿ ನಡುವೆ ಪದೇ–ಪದೇ ತಕರಾರುಗಳು ಆಗುತ್ತಿದ್ದವು. ಸಂಘರ್ಷದ ಮಟ್ಟಕ್ಕೂ ಹೋಗುತ್ತಿದ್ದುದುಂಟು. ಈಗ ಅವೆಲ್ಲಾ ಇಲ್ಲವಾಗಿವೆ. ಸಾಮಾಜಿಕ ಸಾಮರಸ್ಯ ಮರುಸ್ಥಾಪನೆಯಾಗಿದೆ.

ಒಂದು ಕೆರೆ ಹೂಳು ತೆಗೆದರೆ ಆರ್ಥಿಕವಾಗಿ, ಸಾಮಾಜಿಕವಾಗಿ, ಪರಿಸರದ ಸಮತೋಲನ . . .ಹೀಗೆ ಎಷ್ಟೆಲ್ಲಾ ಬದಲಾವಣೆ ಸಾಧ್ಯ ಎಂಬುದಕ್ಕೆ ನರೂರು ಒಳ್ಳೆಯ ಉದಾಹರಣೆ.

ಅಗಸೆಬಾಗಿಲು ಕೆರೆಯ ಮಾದರಿಯಲ್ಲೇ ನರೂರಿನಲ್ಲಿರುವ ಸವತಿ ಕೆರೆ, ಹಾಗೂ ವರದೆ ಕೆರೆಗಳ ಹೂಳನ್ನೂ ತೆಗೆಯಬೇಕು ಎಂಬುದು ಗ್ರಾಮಸ್ಥರ ಅನಿಸಿಕೆ. ಅಗಸೆಬಾಗಿಲು ಕೆರೆಗೆ ಹೋಲಿಸಿದರೆ ಸವತಿ ಕೆರೆಯು ಗಾತ್ರದಲ್ಲಿ ದೊಡ್ಡದು, ಇದರ ಅಭಿವೃದ್ಧಿಯಿಂದ ಗ್ರಾಮಕ್ಕೆ ಹಾಗೂ ಅಕ್ಕ–ಪಕ್ಕದ ಊರುಗಳಿಗೆ ಇನ್ನಷ್ಟು ಪ್ರಯೋಜನವಾಗಲಿದೆ.

"2012ರ ಇಸವಿಯ ಆಸು–ಪಾಸಿನಲ್ಲಿ ಕಾಣುತ್ತಿದ್ದ ಕೆರೆ ವೈಭವ, ಅಚ್ಚುಕಟ್ಟಿನ ಬೆಳೆ ವೈವಿಧ್ಯತೆ ಮತ್ತೆ ಮರುಕಳಿಸುತ್ತಿದೆ, ಅದೇ ಸಂತೋಷ" ಎನ್ನುತ್ತಾರೆ ವಿನಾಯಕ ಭಟ್. ಗ್ರಾಮದ ಎಲ್ಲರ ಅನಿಸಿಕೆಯೂ ಇದೇ ಆಗಿದೆ.

**ಸಂಪರ್ಕ**

ವಿನಾಯಕ ಭಟ್